ಕರ್ನಾಟಕ ವಿಧಾನಸಭೆ

ಗುರುವಾರ 26ನೇ ಜುಲೈ 2001 ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10.40 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ) ರವರು ಪೀಠವನ್ನು ಅಲಂಕರಿಸಿದ್ದರು.

(1) ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಅಧ್ಯಕ್ಷರು :— ಡಿಮ್ಯಾಂಡ್ಸ್ ಮೇಲೆ ಮಾತನಾಡುವುದಕ್ಕೆ ನಮಗೆ ಇವತ್ತು ನಾಳೆ ಸಮಯ ಇದೆ. ಜೊತೆಗೆ ಇವತ್ತು 4-40 ಗಂಟೆಗೆ ಸಭೆಯನ್ನು ಮುಂದೂಡಬೇಕು. ಕಾರಣ ಕಾನ್ಫರೆನ್ಸ್ ಹಾಲ್‌ನಲ್ಲಿ WTO ಮೇಲೆ ಲೆಕ್ಚರ್ ಇದೆ. ಇದು ಬಹಳ ಮುಖ್ಯವಾದ ವಿಷಯ. ಆದ್ದರಿಂದ ನಾವು ಪ್ರಶ್ನೋತ್ತರ ವೇಳೆಯನ್ನು ಒಂದು ಗಂಟೆ ಕಾಲಮಿತಿಯಲ್ಲಿ ಮುಗಿಸೋಣ. ಎಲ್ಲಾ ಮಾನ್ಯ ಸದಸ್ಯರು ಈ ವಿಚಾರದಲ್ಲಿ ಸಹಕರಿಸಬೇಕು.

ಬಸವಕಲ್ಯಾಣ ಯೋಜನಾ ಪ್ರಾಧಿಕಾರವನ್ನು ಮೇಲ್ದರ್ಜೆಗೆ ಏರಿಸುವುದು

288(3177) ಶ್ರೀ ಎಂ.ಜಿ.ಮುಳೆ (ಬಸವಕಲ್ಯಾಣ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೀದರ್ ಜಿಲ್ಲೆಯಲ್ಲಿ ಬೀದರ್ ಪಟ್ಟಣದ ನಂತರ ಬಸವ ಕಲ್ಯಾಣ ಪಟ್ಟಣವು ತೀವ್ರಗತಿಯಲ್ಲಿ ಅಭಿವೃದ್ಧಿಯಾಗುತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದರೆ, ಈಗಿರುವ ಪಟ್ಟಣ ಯೋಜನಾ ಪ್ರಾಧಿಕಾರವನ್ನು ಮೇಲ್ದರ್ಜೆಗೆ ಏರಿಸಿ ಬಸವಕಲ್ಯಾಣ ನಗರಾಭಿವೃದ್ಧಿ ಪ್ರಾಧಿಕಾರ ಸ್ಥಾಪಿಸಲು ಅವಶ್ಯಕವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ, ಹಾಗಿದ್ದರೆ ಯಾವಾಗ ಮೇಲ್ದರ್ಜೆಗೆ ಏರಿಸಲಾಗುವುದು?

ನಗರಾಭಿವೃದ್ಧಿ ಸಚಿವರ ಪರವಾಗಿ ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :—

ಅ) -ಹೌದು-

ಆ) ಕೆಳಕಂಡ ಕಾರಣಗಳಿಂದ ಬಸವಕಲ್ಯಾಣವನ್ನು ನಗರ ಯೋಜನಾ ಪ್ರಾಧಿಕಾರವನ್ನಾಗಿಯೇ ಮುಂದುವರೆಸಲು ಸರ್ಕಾರ ತೀರ್ಮಾನಿಸಿದೆ.

(1) 1991ರ ಜನಗಣತಿ ಪ್ರಕಾರ ಬಸವಕಲ್ಯಾಣ ಪಟ್ಟಣದ ಜನಸಂಖ್ಯೆಯು 42,748 ಮಾತ್ರ ಇರುತ್ತದೆ.

(2) ಬಸವಕಲ್ಯಾಣ ನಗರ ಯೋಜನಾ ಪ್ರಾಧಿಕಾರದ ಹಾಲಿ ಆರ್ಥಿಕ ಸ್ಥಿತಿ ಉತ್ತಮವಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಬಸವಕಲ್ಯಾಣ ನಗರ ಯೋಜನಾ ಪ್ರಾಧಿಕಾರವನ್ನು ಈಗಿನ ಹಂತದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರವನ್ನಾಗಿ ಮೇಲ್ದರ್ಜೆಗೆ ಏರಿಸದಿರಲು ನಿರ್ಧರಿಸಲಾಗಿದೆ.

ಶ್ರೀ ಎಂ.ಜಿ. ಮುಳೆ :— ಮಾನ್ಯ ಅಧ್ಯಕ್ಷರೇ, ಬಸವಕಲ್ಯಾಣ ಜನಸಂಖ್ಯೆ 60 ಸಾವಿರ ಆಗಿದೆ. ನಮ್ಮಲ್ಲಿರುವ ಟೌನ್ ಪ್ಲಾನಿಂಗ್ ಅಥಾರಿಟಿಯನ್ನು ಅಪ್‌ಗ್ರೇಡ್ ಮಾಡಿ ಅದನ್ನು ಡೆವಲಪ್‌ಮೆಂಟ್ ಅಥಾರಿಟಿಯನ್ನಾಗಿ ಮಾಡುವ ಅವಶ್ಯಕತೆ ಬಹಳ ಇದೆ. ಮಾನ್ಯ ಮಂತ್ರಿಗಳು ಏನು ಉತ್ತರ ಕೊಟ್ಟಿದ್ದಾರೆ ಅದು ಸಮಂಜಸವಾಗಿಲ್ಲ. ಅವರು ಅಲ್ಲಿನ ಜನಸಂಖ್ಯೆಯನ್ನು 19991ರ ಜನಗಣತಿ ಪ್ರಕಾರ ಕೊಟ್ಟಿದ್ದಾರೆ. ಈಗ ಲೇಟೆಸ್ಟ್ ಜನಗಣತಿ ಆಗಿದೆ. ಆ ಪ್ರಕಾರ ಅಲ್ಲಿನ ಜನಸಂಖ್ಯೆ 60 ಸಾವಿರಕ್ಕೆ ತಲುಪಿದೆ. ಆದ್ದರಿಂದ ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ ಈಗಿರುವ ಟೌನ್ ಪ್ಲಾನಿಂಗ್ ಅಥಾರಿಟಿಯು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ ಆಗಬೇಕು. ಬಸವಕಲ್ಯಾಣ ಪಟ್ಟಣವು ಬಹಳ ಬೇಗ ಬೆಳೆಯುತ್ತಿರುವ ನಗರವಾಗಿದೆ. ಅಲ್ಲಿ ಟೌನ್ ಪ್ಲಾನಿಂಗ್ ಅಥಾರಿಟಿಯಿಂದ ಕೆಲಸ ಆಗುತ್ತಿಲ್ಲ. ಅಲ್ಲಿ ಬಹಳ ಅವ್ಯವಹಾರವಾಗುತ್ತಿದೆ. ಆದ್ದರಿಂದ ಸರ್ಕಾರ ದೊಡ್ಡ ಮನಸ್ಸು ಮಾಡಿ ಇದನ್ನು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯನ್ನಾಗಿ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ಈಗ ನನ್ನ ಹತ್ತಿರ ಇರುವ ಅಂಕಿಅಂಶಗಳ ಪ್ರಕಾರ 1991ರ ಜನಗಣತಿಯ ಆಧಾರದ ಮೇಲೆ ಇಲ್ಲಿ 42,748 ಜಂಸಂಖ್ಯೆ ಇದೆ. ಈಗ ನಾವು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯನ್ನು ಹೆಚ್ಚಾಗಿ ಡಿಸ್ಟ್ರಿಕ್ಟ್ ಪ್ಲೇಸಸ್ ಎಲ್ಲಿವೆ ಅಲ್ಲಿ ಮಾಡಿದ್ದೇವೆ. ಮತ್ತು ಎಲ್ಲಿ ಒಂದು ಲಕ್ಷಕ್ಕಿಂತ ಮೇಲ್ಪಟ್ಟು ಜನಸಂಖ್ಯೆ ಇದೆ ಅಂತಹ ನಗರಗಳಲ್ಲಿ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ ಮಾಡಿದ್ದೇವೆ. ಏರಡನೆಯದು, ನಾವು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ ಮಾಡಿದ ಮೇಲೆ ಅಲ್ಲಿನ ನೌಕರರಿಗೆ ಸಂಬಳ ಕೊಡುವುದಕ್ಕೆ ಹಣ ಬೇಕು. ಸರ್ಕಾರ ಇವರಿಗೆ ಅನುದಾನ ಕೊಡುವುದಿಲ್ಲ. ಅವರೇ ಸ್ವಂತ ಸ್ಕೀಮ್ಸ್ ಮಾಡಿ ಹಣವನ್ನು ಕ್ರೋಢೀಕರಿಸಬೇಕು. ಈಗ ಅಲ್ಲಿ ಹಣದ ಕೊರತೆ ಇದೆ. ಅದನ್ನು ನಾವು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ ಎಂದು ಮಾಡಿ ಅಲ್ಲಿ ಸಂಬಳ ಸಾರಿಗೆ ಕೊಡುವುದಕ್ಕೆ ಹಣ ಇಲ್ಲದಿದ್ದರೆ ತೊಂದರೆಯಾಗುತ್ತದೆ. ಒಂದು ವೇಳೆ 2001ರ ಜನಗಣತಿಯ ವರದಿ ಬಂದ ಮೇಲೆ ಜನಸಂಖ್ಯೆ ಹೆಚ್ಚಾಗಿದ್ದು ಮತ್ತು ಅವರ ಆಧಾಯ ಹೆಚ್ಚಾಗಿದ್ದರೆ ಆಗ ಅದನ್ನು ಪರಿಶೀಲನೆ ಮಾಡೋಣ.

ಶ್ರೀ ಎಂ.ಜಿ. ಮುಳೆ :— ಮಾನ್ಯ ಅಧ್ಯಕ್ಷರೇ, ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ ಮಾಡಿದರೆ ಇನ್‌ಕಮ್ ಕ್ರೈಟೀರಿಯಾ ಹೇಗೆ ಬರುತ್ತದೆ? ಟೌನ್ ಪ್ಲಾನಿಂಗ್ ಅಥಾರಿಟಿಯವರು ಆದಾಯ ಕ್ರೋಢೀಕರಿಸುವುದಿಲ್ಲ. ಅವರು ಪ್ಲಾನಿಂಗ್ ಮಾತ್ರ ಮಾಡುತ್ತಾರೆ. ಅವರದ್ದು ಡೆವಲಪ್‌ಮೆಂಟ್ ಆಕ್ಟೀವಿಟಿ ಏನೂ ಇಲ್ಲ. ಅಲ್ಲಿನ ಜನಸಂಖ್ಯೆ ಈಗ 60 ಸಾವಿರ ಆಗಿದೆ. ಬೀದರ್ ಬಿಟ್ಟ ಮೇಲೆ ನೆಕ್ಸ್ಟ್ ಬಸವಕಲ್ಯಾಣ ಅದು ರೆವಿನ್ಯೂ ಸಬ್ ಡಿವಿಜನ್ ಇದೆ. ಆದ್ದರಿಂದ ಅಲ್ಲಿ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯ ಅವಶ್ಯಕತೆ ಇದೆಯೆಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿರತಕ್ಕಂಥ ಜನಸಂಖ್ಯೆ 1991ರ ಜನಗಣತಿ ಆಧಾರದ್ದು. ಈಗ 2001ರ ಜನಗಣತಿಯ ಜನಸಂಖ್ಯೆ ಬಂದ ಮೇಲೆ ಅದನ್ನು ನೋಡಿಕೊಂಡು ನಾವು ಈ ವಿಷಯದ ಬಗ್ಗೆ ಪರಿಶೀಲನೆ ಮಾಡೋಣ.

ರಾಜ್ಯದ ಮಹಾ ನಗರಪಾಲಿಕೆ ಹಾಗೂ ನಗರಸಭೆಗಳ ಕಂಪ್ಯೂಟರೀಕರಣ

295(3516) ಶ್ರೀ ಸಭಾಪತಿ ಯು.ಆರ್. (ಉಡುಪಿ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಮಹಾ ನಗರಪಾಲಿಕೆಗಳು ಮತ್ತು ನಗರಸಭೆಗಳ ನ್ನು ಕಂಪ್ಯೂಟರೀಕರಣಗೊಳಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

ಆ) ಆಡಳಿತದಲ್ಲಿ ಮಾಹಿತಿ ತಂತ್ರಜ್ಞಾನ ಅಳವಡಿಕೆಯು ರಾಜ್ಯ ಸರ್ಕಾರದ ನೀತಿಯಾದುದರಿಂದ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಕಂಪ್ಯೂಟರೀಕರಣಗೊಳಿಸಬೇಕಾಗಿದ್ದು ಈ ಹಿನ್ನಲೆಯಲ್ಲಿ ನಗರಾಭಿವೃದ್ಧಿ ಸಚಿವಾಲಯ ಯಾವ ಪ್ರಗತಿಯನ್ನು ಸಾಧಿಸಿದೆ?

ನಗರಾಭಿವೃದ್ಧಿ ಸಚಿವರ ಪರವಾಗಿ ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :—

ಅ) ಎಲ್ಲಾ 5 ನಗರಪಾಲಿಕೆಗಳನ್ನು ಕಂಪ್ಯೂಟರೀಕರಣಗೊಳಿಸಲಾಗುತ್ತಿದೆ. ಇದಕ್ಕಾಗಿ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆಗೆ ನೂರು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಸಾಫ್ಟ್‌ವೇರ್ ಅಭಿವೃಧಿಯು ಕಾರ್ಯಗತಿಯಲ್ಲಿದೆ.

ಪ್ರಸ್ತುತ ನಗರಸಭೆಗಳನ್ನು ಕಂಪ್ಯೂಟರೀಕರಣಗೊಳಿಸುವ ಪ್ರಸ್ತಾವನೆಯು ಸರ್ಕಾರದಲ್ಲಿರುತ್ತದೆ. ಆದಾಗ್ಯೂ ಪೌರಾಡಳಿತ ನಿರ್ದೇಶನಾಲಯವು ಈಗಾಗಲೇ ಕಂಪ್ಯೂಟರೀಕರಣಗೊಂಡಿದ್ದು ಎಲ್ಲಾ ನಗರಸಭೆ : ಪುರಸಭೆಗಳ ಮಾಹಿತಿಗಳನ್ನು ಕ್ರೋಢೀಕರಿಸಲಾಗಿದೆ.

ಆ) ರಾಜ್ಯದಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಕೆಲವು ಪ್ರಾಧಿಕಾರಗಳು ಈಗಾಗಲೇ ಕಂಪ್ಯೂಟರೀಕರಣಗೊಳಿಸಿದ್ದು, ಉಳಿದ ಪ್ರಾಧಿಕಾರಗಳು ಕಂಪ್ಯೂಟರ್‌ಗಳನ್ನು ಅಳವಡಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ.